# ಅಂಧಕಾರಮಯ ಆಧುನಿಕ ಜಗತ್ತಿನ ಸೂರ್ಯ–ಶ್ರೀರಾಮಕೃಷ್ಣರು

ಇಂಗ್ಲಿಷ್ ಮೂಲ: **ಸ್ವಾಮಿ ಮುಕ್ತಿದಾನಂದ** ಅನುವಾದ : **ಸರಗೂರು ರಮೇಶ್**

ಶ್ರೀರಾಮಕೃಷ್ಣರು ಇಂದಿನ ಪ್ರಪಂಚಕ್ಕೆ ಹಲವು ದೃಷ್ಟಿಗಳಿಂದ ಪ್ರಸ್ತುತರು ; ಈ ವಿಷಯವನ್ನು ಕುರಿತ ಚಿಂತನೆ ಇಲ್ಲಿದೆ. ೨೦೨೧ರ ಮಾರ್ಚ್ ೧೫ರಂದು ಶ್ರೀರಾಮಕೃಷ್ಣರ ಜಯಂತಿಯ ಸಂದರ್ಭದಲ್ಲಿ ಬೇಲೂರು ಮಠದಲ್ಲಿ ನೀಡಿದ ಆಂಗ್ಲ ಪ್ರವಚನದ ಕನ್ನಡ ಭಾಷಾಂತರವಿದು. ಪೂಜ್ಯ ಸ್ವಾಮೀಜಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು; 'ವಿವೇಕಪ್ರಭ'ದ ವ್ಯವಸ್ಥಾಪಕ ಸಂಪಾದಕರು. ರಾಮಕೃಷ್ಣ ಮಹಾಸಂಘದ ವಿಶ್ವಸ್ತ ಮಂಡಲಿಯ ಸದಸ್ಯರಾಗಿರುವ ಅವರು ಉತ್ತಮ ಚಿಂತಕರೂ, ಪ್ರವಚನಕಾರರೂ, ಲೇಖಕರೂ ಆಗಿದ್ದಾರೆ.

ಶ್ರೀರಾಮಕೃಷ್ಣರ ಜೀವನ ಮತ್ತು ಬೋಧನೆಯು ಹಲವು ರೀತಿಯಲ್ಲಿ ವಿಶಿಷ್ಟವಾದುದು. ಸನಾತನಧರ್ಮವನ್ನು ಪುನರುಜ್ಜೀವನಗೊಳಿಸಲು ಮತ್ತು ಮನುಕುಲದ ಆಧ್ಯಾತ್ಮಿಕ ಪರಿವರ್ತನೆಯನ್ನು ಇಳೆಯ ಮೇಲೆ ಸಾಧಿಸಲು ಪರಮಪ್ರಭುವು ಶ್ರೀರಾಮಕೃಷ್ಣರಾಗಿ ಅವತರಿಸಿದನು. ಋಷಿಧರ್ಮವನ್ನು ಎತ್ತಿಹಿಡಿಯುವುದು ಮತ್ತು ದೇವರಲ್ಲಿ ಜನರ ಶ್ರದ್ಧೆಯನ್ನು ಉದ್ದೀಪಿಸುವುದೂ ಅವರ ಅವತರಣದ ಉದ್ದೇಶವಾಗಿತ್ತು. ಹಲವು ಬಗೆಯ ಪ್ರಮುಖಸಾಧನಗಳನ್ನು ಅನುಷ್ಠಾನ ಮಾಡಿದವರಲ್ಲಿ ಶ್ರೀರಾಮಕೃಷ್ಣರು ಅನುಪಮರಾಗಿದ್ದಾರೆ. ಧರ್ಮಜೀವನದ ಸಾರಭೂತ ಜ್ಞಾನವನ್ನು ಅವಲಂಬಿಸಿದ ಸುಲಭಮಾರ್ಗವನ್ನು ಅವರು ಆಧುನಿಕ ಕಾಲಕ್ಕೆ ನೀಡಿದ್ದಾರೆ. ನಾವು ಇದನ್ನು ಅರ್ಥಮಾಡಿಕೊಂಡು ಅಭ್ಯಾಸ ಮಾಡಬೇಕು. ಹೊಟ್ಟು ಮತ್ತು ಧೂಳಿನಿಂದ ಧಾನ್ಯವನ್ನು ಪ್ರತ್ಯೇಕಗೊಳಿಸುವಂತೆ, ಅವರು ಧರ್ಮಕ್ಷೇತ್ರದ ತಿರುಳಾದ ಆಧ್ಯಾತ್ಮಿಕತೆಯನ್ನು ಸ್ಪಷ್ಟವಾಗಿ ಬೇರ್ಪಡಿಸಿದ್ದಾರೆ. ಧಾರ್ಮಿಕ ವಲಯದ ಸಂಕೀರ್ಣತೆ, ಜಟಿಲತೆಗಳನ್ನು ಸುಲಭಗ್ರಾಹ್ಯವಾಗುವಂತೆ ಸರಳಗೊಳಿಸಿದ್ದಾರೆ. ಅವರ ಜೀವನವು ಒಂದು ಆಧ್ಯಾತ್ಮಿಕ ಸಂಶೋಧನೆಯ ಪ್ರಯೋಗಾಲಯದಂತಿದೆ. ವಿಭಿನ್ನ ಧರ್ಮಗಳು ನೀಡುವ, ಬೋಧಿಸುವ ಮಾರ್ಗಗಳು ಸತ್ಯವೇ ಮತ್ತು ಅವುಗಳು ಭಗವಂತನ ಅನುಭವವನ್ನು ನಮಗೆ ದಿಟವಾಗಿಯೂ ತಂದುಕೊಡುತ್ತವೆಯೇ ಎಂದು ಅವರು ಸ್ವಂತ ಅನುಭವಗಳಲ್ಲಿ ಅನ್ವೇಷಿಸಿ ಸಫಲರಾದರು. ಅಧ್ಯಾತ್ಮವು ವಿಜ್ಞಾನದಂತೆಯೇ ವೀಕ್ಷಣೆ, ಪ್ರಯೋಗ, ವಿಶ್ಲೇಷಣೆ ಮತ್ತು ಅಂತಿಮ ತೀರ್ಮಾನಗಳ ಹಂತಗಳ ಮೂಲಕ ಸತ್ಯಶೋಧನೆಗೆ ತೊಡಗುತ್ತದೆ. ಶ್ರೀರಾಮಕೃಷ್ಣರು ಸತ್ಯದೇಗುಲದ ಯಾವ ಮಾರ್ಗವನ್ನೂ ಪರೀಕ್ಷಿಸದೆ ಬಿಡಲಿಲ್ಲ. ಅವುಗಳನ್ನು ಒಂದಾದ ಮೇಲೆ ಒಂದರಂತೆ ಅಭ್ಯಾಸ ಮಾಡುತ್ತಾ, ಗುರಿಮುಟ್ಟುತ್ತಾ ಆಧ್ಯಾತ್ಮಿಕ ಹಿಮಾಲಯದ ಶಿಖರಗಾಮಿಯಾದರು. ಈ ಬಗೆಯ ನಿದರ್ಶನವು ಧರ್ಮಲೋಕದ ಇತಿಹಾಸದಲ್ಲಿಯೇ ಅಭೂತಪೂರ್ವವಾದುದು. ಮೊದಲಿಗೆ ಪರಿಶುದ್ಧತೆ, ಏಕಾಗ್ರತೆ, ತಪೋನಿಷ್ಠೆಗಳನ್ನು ಅನುಷ್ಠಾನ ಮಾಡುತ್ತಾ ಕಲ್ಕತ್ತದ ಕಾಳೀಮಂದಿರದಲ್ಲಿ ಸಾಂಪ್ರದಾಯಿಕ ಪೂಜೆ ಮಾಡುವ ಅರ್ಚಕರಾಗಿ ಆರಂಭಿಸಿದರು. ಹೃದಯಾಂತರಾಳದ ಪ್ರಾರ್ಥನೆ ಮತ್ತು ಏಕನಿಷ್ಠಭಕ್ತಿಯಿಂದ ದಿವ್ಯಮಾತೆ ಭವತಾರಿಣಿಯ ಪವಿತ್ರ ದರ್ಶನ ಪಡೆದರು. ನವವಿಧ ಭಕ್ತಿಯನ್ನು ಆಚರಿಸಿ ದೇವಾಧಿದೇವನನ್ನು ಆರಾಧಿಸಿದರು. ತಾಂತ್ರಿಕ ಸಾಧನೆಯ ಅಗ್ನಿಪರೀಕ್ಷೆಗಳನ್ನು ಜಗನ್ಮಾತೆಯ ಮುಗ್ಧಶಿಶುವಾಗಿ ದಾಟಿ ಗೆದ್ದರು. ಕೊನೆಗೆ ವೇದಾಂತ ಸಾಧನೆಯನ್ನು ಮಾಡಿ ಅಲ್ಪಾವಧಿಯಲ್ಲಿ ನಿರ್ವಿಕಲ್ಪ ಸಮಾಧಿಯನ್ನು ಪಡೆದರು. ಇದು ಆಧ್ಯಾತ್ಮಿಕ ಅನುಭವದ ಪರಾಕಾಷ್ಠೆಯ ಸ್ಥಿತಿಯಾಗಿದೆ. ಹಿಂದೂಧರ್ಮದ ಆಚೆಗೂ ಉತ್ಸಾಹದಿಂದ ಧುಮುಕಿ ಇಸ್ಲಾಂ ಧರ್ಮದ ಸೂಫಿ ಬೋಧನೆಗಳನ್ನೂ ಅಭ್ಯಾಸಮಾಡಿ, ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪಡೆದರು. ಬೌದ್ಧ ಧರ್ಮದ ಮೂಲಸಂದೇಶವನ್ನೂ ಗ್ರಹಿಸಿದರು. ಕ್ರೈಸ್ತಧರ್ಮ ಮತ್ತು ಇಸ್ಲಾಂನ ಸಂಸ್ಥಾಪಕರು ಮತ್ತು ಪ್ರವಾದಿಗಳ ದರ್ಶನವನ್ನೂ ಪಡೆದು ಪರಿಪೂರ್ಣರಾದರು.

ಹೀಗೆ ಅದಮ್ಯವೂ ಅಪ್ರತಿಹತವೂ ಆದ ಆಧ್ಯಾತ್ಮಿಕ ಅಭೀಪ್ಸೆಯಿಂದ, ತಣಿಸಲಾಗದ ತಳಮಳ ವ್ಯಾಕುಲತೆಗಳಿಂದ ಶ್ರೀರಾಮಕೃಷ್ಣರು ಹಲವಾರು ಪಥವನ್ನು ಕ್ರಮಿಸಿ ಭಗವಂತನ ಪ್ರತ್ಯಕ್ಷ ಅನುಭವವನ್ನು ಪಡೆದರು. ಈ ಎಲ್ಲಾ ಮಾರ್ಗಗಳೂ ಕೂಡ ಸತ್ಯದೆಡೆಗೆ ಜೀವಾತ್ಮರನ್ನು ಕೊಂಡೊಯ್ಯುತ್ತವೆ ಎಂದು ಸಾರಿದರು. ಈ ರೀತಿಯಲ್ಲಿ ಧಾರ್ಮಿಕ ಗೊಂದಲಗಳನ್ನೂ, ಪ್ರತ್ಯೇಕತೆಯ ಸಂಘರ್ಷಗಳನ್ನೂ ಪರಿಹರಿಸಿದರು. ಪ್ರಾಮಾಣಿಕತೆ, ನಿಷ್ಠೆ, ಏಕಾಗ್ರತೆ, ಪರಿಶುದ್ಧತೆ, ತೀವ್ರ ವ್ಯಾಕುಲತೆಗಳಿಂದ ಯಾವುದೇ ಮಾರ್ಗವನ್ನು ಅನುಸರಿಸಿದರೂ ನಾವು ನಮ್ಮ ಪ್ರಜ್ಞೆಯನ್ನು ಪರಿವರ್ತಿಸಬಹುದು ಮತ್ತು ದೇವರ ಸಾಕ್ಷಾತ್ಕಾರ ಪಡೆಯಬಹುದು ಎಂದು ಜಗದ ಜನರಿಗೆ ಮನಗಾಣಿಸಿದರು. ಶ್ರೀಅರವಿಂದರು ಶ್ರೀರಾಮಕೃಷ್ಣರ ಭವ್ಯಜೀವನವನ್ನು ಕುರಿತು ಹೀಗೆ ನುಡಿದಿದ್ದಾರೆ: ''ಆಧುನಿಕ ಕಾಲದ ವಿಶಿಷ್ಟ ನಿದರ್ಶನವಾಗಿ, ಶ್ರೀರಾಮಕೃಷ್ಣರ ಜೀವನದಲ್ಲಿ ಮೊದಲಿಗೆ ನೇರವಾಗಿ ಭಗವಂತನ ಸಾಕ್ಷಾತ್ಕಾರದೆಡೆಗೆ ನುಗ್ಗುವ ಒಂದು ಮಹಾನ್ ಆಧ್ಯಾತ್ಮಿಕ ಸಾಮರ್ಥ್ಯವನ್ನು ಕಾಣುತ್ತೇವೆ. ದೇವನ ಸಾಮ್ರಾಜ್ಯವನ್ನು ರಭಸದಿಂದ ಮುನ್ನುಗ್ಗಿ ವಶಪಡಿಸಿಕೊಂಡಂತೆ ಈ ಸಾಹಸವು ತೋರಿಬರುತ್ತದೆ. ತದನಂತರ ನಂಬಲಸಾಧ್ಯವಾದ ವೇಗದಿಂದ ಒಂದಾದ ಮೇಲೆ ಒಂದರಂತೆ ವಿಭಿನ್ನ ಯೋಗ ಪದ್ಧತಿಗಳನ್ನು ಅನುಷ್ಠಾನ ಮಾಡಿ, ಅದರ ಸಾರ

ಸರ್ವಸ್ವವನ್ನೂ ತಮ್ಮದನ್ನಾಗಿಸಿಕೊಂಡರು. ಆದರೆ ಮರಳಿ ಈ ಸಮಗ್ರ ಪ್ರಯತ್ನದ ಹೃದಯಭಾಗವಾದ, ಭಕ್ತಿಯಿಂದ ಭಗವಂತನ ಸಾಕ್ಷಾತ್ಕಾರ ಎಂಬ ವಿಷಯವೇ ಸ್ಥಾಯಿ ಎಂಬ ನಿಲುವು ತಾಳುತ್ತಿದ್ದರು. ಆಂತರ್ಯದಲ್ಲಿ ಉದ್ಭವಿಸಿದ ಆಧ್ಯಾತ್ಮಿಕ ತಪಸ್ಸನ್ನು ಹಲವಾರು ಬಾಹ್ಯ ಅನುಭವಗಳಿಗೆ ವಿಸ್ತರಿಸುತ್ತಿದ್ದರು. ಅಂತಃಸ್ಫುರಣೆಯ ಜ್ಞಾನದ ಸ್ವಯಂ ಸ್ಫೂರ್ತಿಯಿಂದ ಸ್ಪಂದಿಸುತ್ತಿದ್ದರು. ಈ ನಿದರ್ಶನವನ್ನು ಒಂದು ಅಪವಾದ ಎನ್ನಬಹುದೇ ಹೊರತು ಸಾರ್ವತ್ರೀಕರಣಗೊಳಿಸಲಾಗದು.'' ಆದ್ದರಿಂದಲೇ ಬಹುಶಃ ಸ್ವಾಮಿ ವಿವೇಕಾನಂದರು ಶ್ರೀರಾಮಕೃಷ್ಣರನ್ನು ''ಅವತಾರ ವರಿಷ್ಠ'' ಎಂದು ಸಂಬೋಧಿಸಿದ್ದಾರೆ.

ಆದರೆ ಅವರು ಶ್ರೀರಾಮಚಂದ್ರನಂತೆ ಕೋದಂಡಪಾಣಿಯೂ ಆಗಿಲ್ಲ; ಶ್ರೀಕೃಷ್ಣನಂತೆ ಸುದರ್ಶನ ಚಕ್ರವನ್ನೂ ಹಿಡಿದಿಲ್ಲ. ಇಂತಹಾ ಪೌರಾಣಿಕ ವೈಭವಗಳಿಲ್ಲದೇ ಸಂಪೂರ್ಣ ಆಯುಧರಹಿತರಾಗಿದ್ದರು. ರಾಜಸಿಕ ಲಕ್ಷಣಗಳ ಯಾವ ಸುಳಿವೂ ಅವರಲ್ಲಿರಲಿಲ್ಲ. ಒಬ್ಬ ಅತಿ ಸಾಮಾನ್ಯ ಗ್ರಾಮೀಣ ಮುಗ್ಧ ವ್ಯಕ್ತಿಯಾಗಿ, ಸರಳತೆಯ ಮೂರ್ತಸ್ವರೂಪವಾಗಿ ಅಗಾಧವಾದ ಆಧ್ಯಾತ್ಮಿಕತೆಯನ್ನು ಪ್ರಕಾಶಪಡಿಸಿದ್ದಾರೆ. ಅವರು ದಿವ್ಯಪ್ರಜ್ಞೆಯಿಂದ ತುಂಬಿ ತುಳುಕುತ್ತಿದ್ದರು. ಸಮಾಧಿಮಗ್ನರಾಗಿ ಇರುತ್ತಿದ್ದರು. ಭಾವಸಮಾಧಿ ಎಂಬುದು ಅವರಿಗೆ ಪ್ರತಿ ಸನ್ನಿವೇಶದಲ್ಲಿಯೂ ಉಸಿರಾಡುವಷ್ಟು ಸ್ವಾಭಾವಿಕವಾಗಿತ್ತು. ಆಧ್ಯಾತ್ಮಿಕ ಸತ್ಯದ ಸಾಕಾರ ಮೂರ್ತಿಯಾಗಿ ಅವರು ಕಂಗೊಳಿಸುತ್ತಿದ್ದರು. ಆದ್ದರಿಂದಲೇ ಅವರ ವ್ಯಕ್ತಿತ್ವದ ಭವ್ಯತೆ ಮತ್ತು ಆಧ್ಯಾತ್ಮಿಕ ಮಹಿಮೆಗಳು ಜಗತ್ತಿನಾದ್ಯಂತ ನಿಧಾನವಾಗಿ ತಮ್ಮ ಪ್ರಭಾವಮುದ್ರೆಯನ್ನು ಒತ್ತುತ್ತಾ ವ್ಯಾಪಕವಾಗಿ ಪಸರಿಸಲಾರಂಭಿಸಿವೆ. ಆಧ್ಯಾತ್ಮಿಕ ಹಂಬಲವುಳ್ಳ ಜನರು ಇದನ್ನು ಗುರುತಿಸುತ್ತಾ, ಅರ್ಥಮಾಡಿಕೊಳ್ಳುತ್ತಾ, ಶ್ರೀರಾಮಕೃಷ್ಣರನ್ನು ಆರಾಧಿಸುತ್ತಾ ಅವರನ್ನು ತಮ್ಮ ಆಧ್ಯಾತ್ಮಿಕ ಗುರುವಾಗಿ ಸ್ವೀಕರಿಸಿ ತಮ್ಮ ಹೃದಯಮಂದಿರಗಳಲ್ಲಿ ಪ್ರತಿಷ್ಠಾಪನೆ ಮಾಡಿಕೊಳ್ಳುತ್ತಿದ್ದಾರೆ. ದೇವರ ಬಗ್ಗೆ, ಆಧ್ಯಾತ್ಮಿಕ ಅನುಭವದ ಬಗ್ಗೆ, ಧರ್ಮದ ಬಗ್ಗೆ ಯಾರಿಗಾದರೂ ಪ್ರಶ್ನೆಗಳು ಮೂಡಿ ಜಿಜ್ಞಾಸೆ ಪ್ರಾರಂಭವಾದರೆ ಅವರೆಲ್ಲರೂ ಅಗತ್ಯವಾಗಿ ತಮ್ಮ ಸಂದೇಹಗಳಿಗೆ ಅಧಿಕೃತ ಉತ್ತರ ಅಥವಾ ಪರಿಹಾರ ಪಡೆಯಲು ಶ್ರೀರಾಮಕೃಷ್ಣರ ಸನ್ನಿಧಿಗೆ ಬರಲೇಬೇಕಾಗಿದೆ.

ಶ್ರೀರಾಮಕೃಷ್ಣರ ಮತ್ತೊಂದು ವಿಶೇಷವೇನೆಂದರೆ ಅವರ ಅವತರಣದ ಐತಿಹಾಸಿಕತೆ. ಅವರು ಪುರಾಣಪುರುಷರು. ಅವರು ಇತಿಹಾಸದಲ್ಲಿ ದಾಖಲೆಸಹಿತವಾಗಿ ನಮಗೆ ಆಪ್ತವೂ, ಸಮೀಪವೂ ಆಗುವ ದಿವ್ಯಾವತಾರ. ಕೇವಲ ೧೮೦ ವರ್ಷಗಳ ಹಿಂದೆ ಗಂಗಾತೀರದ ದಕ್ಷಿಣೇಶ್ವರ ದೇವಾಲಯದ ಆಸುಪಾಸಿನಲ್ಲಿ ಅಮೋಘಸಾಧನೆಗಳನ್ನು ಅವರು ಮಾಡಿದರು. ಅವರ ಸಮಾಧಿ ಮಂದಿರವು ಗಂಗೆಯ ಕಾಶಿಪುರದ ದಡದಲ್ಲಿಯೇ ಇದ್ದು ಬೇಲೂರು ಮಠದಿಂದ ಅದರ ದರ್ಶನವನ್ನು ಪಡೆಯಬಹುದಾಗಿದೆ. ಶ್ರೀರಾಮಕೃಷ್ಣರ ಜೀವನದ ಸಂದರ್ಭಗಳು, ದಿವ್ಯ ನುಡಿಗಳು, ದಿನಾಂಕ, ಕಾಲ ಇತ್ಯಾದಿಗಳನ್ನು ಕರಾರುವಾಕ್ಕಾಗಿ ದಾಖಲಿಸಿ 'ಶ್ರೀರಾಮಕೃಷ್ಣ ವಚನವೇದ' ಎಂಬ ಗ್ರಂಥವನ್ನು ಸಿದ್ಧಪಡಿಸಿಕೊಟ್ಟಿರುವ ಮಾಸ್ಟರ್‌ಮಹಾಶಯರ (ಮಹೇಂದ್ರನಾಥ ಗುಪ್ತ) ಮಹಾನ್ ಸೇವೆಯಿಂದ ಶ್ರೀರಾಮಕೃಷ್ಣರು ಜೀವನವು ನಮಗೆ ಐತಿಹಾಸಿಕವಾಗಿ ಹೆಚ್ಚು ಆಪ್ತವೂ ಮತ್ತು ಅಧಿಕೃತವೂ ಆಗಿದೆ. ಈ ನಿಟ್ಟಿನಲ್ಲಿ ದೈವನಿಯೋಜಿತವಾಗಿ ತಮಗೆ ಒದಗಿಬಂದ ಪಾತ್ರವನ್ನು ಮಾಸ್ಟರ್ ಮಹಾಶಯ ತಮ್ಮ ಜೀವನದ ತಪಸ್ಸಾಗಿ ಸ್ವೀಕರಿಸಿ ಸಾಧಿಸಿದ್ದಾರೆ. ಆದ್ದರಿಂದ 'ಶ್ರೀರಾಮಕೃಷ್ಣ ವಚನವೇದ' (The Gospel of Sri Ramakrishna) ಗ್ರಂಥವು ವಾಸ್ತವಿಕವಾಗಿ ಆಧುನಿಕ ಕಾಲದ ಶಾಸ್ತ್ರವಾಗಿದೆ. ನಮಗೆ ದಾರಿ ತೋರುವ ಮಾರ್ಗದರ್ಶಿಕೆಯಾಗಿದೆ. ಮನುಕುಲಕ್ಕೆ ಭಗವಂತನಿಂದ ಅನುಗ್ರಹೀತವಾದ ಅಮೂಲ್ಯವರವಾಗಿದೆ. ಅದು ಮುಂದೆ ಸರ್ವಕಾಲಕ್ಕೂ ಪ್ರಸ್ತುತವಾದದ್ದು, ಜಗತ್ತಿನಾದ್ಯಂತ ದೇವರನ್ನು ಅರಸುವ ಸತ್ಯಸಾಧಕರಿಗೆ ಸ್ಫೂರ್ತಿಯ ನೆಲೆಯಾಗಿದೆ. ಭಗವದ್ಗೀತೆಯಂತೆಯೇ ಇದು ಭಗವಂತನ ಅಧಿಕೃತ ವಾಣಿ. ಶ್ರೀರಾಮಕೃಷ್ಣರ ಅವತಾರದ ಸತ್ಯವನ್ನು ಅವರ ವಾಣಿಯಿಂದಲೇ ಈ ಗ್ರಂಥವು ಅನಾವರಣ ಮಾಡುತ್ತದೆ. ಆಧುನಿಕ ಸೌಲಭ್ಯಗಳನ್ನು ಬಳಸಿಕೊಂಡು ಈ ದೇವವಾಣಿಯನ್ನು ವ್ಯವಸ್ಥಿತವಾಗಿ ದಾಖಲಿಸಲಾಗಿದೆ. ''ಭಗವಂತನಿದ್ದಾನೆ'' ಮತ್ತು ''ದೇವರನ್ನು ನಾವು ಕಾಣಬಹುದು'' ಎಂಬುದನ್ನು ಶ್ರೀರಾಮಕೃಷ್ಣರ ಪ್ರತ್ಯಕ್ಷ ನುಡಿಗಳು ನಿಃಸಂದಿಗ್ಧವಾಗಿ ಸ್ವಾನುಭವದಿಂದ ಧೃಢೀಕರಿಸಿವೆ. ದೇವರ ಅಸ್ತಿತ್ವವನ್ನು ಸಂದೇಹಿಸುವ, ಅಪನಂಬಿಕೆಯನ್ನು ಪ್ರೋತ್ಸಾಹಿಸುವ ಜಗತ್ತಿನ ಎಲ್ಲಾ ಧರ್ಮದ ಜನರಿಗೆ ಶ್ರೀರಾಮಕೃಷ್ಣರ 'ವಚನವೇದ'ವು ನೇರ ಉತ್ತರ ನೀಡಿ ಎಲ್ಲಾ ಧರ್ಮಗಳನ್ನು ಸಂರಕ್ಷಿಸುತ್ತದೆ. ಧರ್ಮಗಳ ಆಧ್ಯಾತ್ಮಿಕ ಆಯಾಮವು ರಮ್ಯಕಾವ್ಯವೂ ಅಲ್ಲ, ಮನಸ್ಸಿನ ಕಲ್ಪನೆಯೂ ಅಲ್ಲ ಎಂಬುದು ಸುಸ್ಪಷ್ಟವಾಗುತ್ತದೆ. ಇಂದ್ರಿಯಾನುಭವಗಳ ಆಚೆಗೆ ನಾವು ಅನುಭವಿಸಬಹುದಾದ ಸತ್ಯವೂ, ದಿವ್ಯವೂ ಆದ ಆಧ್ಯಾತ್ಮಿಕ ಆಯಾಮವಿದೆ. ವ್ಯಾಕುಲತೆ ಉಳ್ಳವರು ಯಾವುದೇ ಧರ್ಮದ ಮಾರ್ಗವನ್ನು ಅತ್ಯಂತ ಪ್ರಾಮಾಣಿಕವಾಗಿ ಅನುಸರಿಸಿದರೆ ದೇವರ ಅನುಭವ ಅಥವಾ ಸಾಕ್ಷಾತ್ಕಾರವನ್ನು ಪಡೆಯಬಹುದು ಎಂದು ಈ ಗ್ರಂಥವು ಅನ್ವೇಷಕರನ್ನು ಉತ್ತೇಜಿಸಿ ಪ್ರೋತ್ಸಾಹಿಸುತ್ತದೆ.

ಆದ್ದರಿಂದ 'ಶ್ರೀರಾಮಕೃಷ್ಣ ವಚನವೇದ' ಕೃತಿಯು ಅತ್ಯಂತ ಅಮೂಲ್ಯವಾದ ಆಧ್ಯಾತ್ಮಿಕ ನೆರವು ನೀಡುವ ಕೃತಿಯಾಗಿದೆ. ಅದರ ಅಧ್ಯಯನವು ಬಹು ಸುಲಭವಾಗಿ ನಮ್ಮ ಮನಸ್ಸನ್ನು ಉನ್ನತೀಕರಿಸಿ ದೈವೋನ್ಮುಖವಾಗಿಸುತ್ತದೆ. ನಾವು ದಕ್ಷಿಣೇಶ್ವರಕ್ಕೆ ಭೇಟಿ ನೀಡಿ ಶ್ರೀರಾಮಕೃಷ್ಣರ ಕೊಠಡಿಯೊಳಗೆ ಹೋದರೆ ಅವರ ಜೀವಂತ ದಿವ್ಯ ಸನ್ನಿಧಿಯನ್ನು ಅವರ ಕಾಲದ ಭಕ್ತರಂತೆಯೇ ಹೃದಯದಲ್ಲಿ ಅನುಭವಿಸಬಹುದು. 'ಶ್ರೀರಾಮಕೃಷ್ಣ ವಚನವೇದ'ದಲ್ಲಿ ಮಾಡಿರುವ ವರ್ಣನೆಗಳು, ಪರಮಹಂಸರು ಮಂಚದ ಮೇಲೆ ಕುಳಿತಿರುವುದು, ಪಂಚವಟಿಯಲ್ಲಿ ನಡೆದಾಡುತ್ತಿರು

ವುದು, ಕಲ್ಕತ್ತದ ಭಕ್ತನ ಮನೆಗೆ ತೆರಳುವುದು ಇತ್ಯಾದಿ ಅನೇಕ ಪ್ರಸಂಗಗಳು ಸಚೇತನವಾಗಿ ಕಣ್ಮುಂದೆ ನಿಲ್ಲುತ್ತವೆ. ಕಾಲದಲ್ಲಿ ಹಿಂದೆ ಹೋಗಿ ಆ ದಿವ್ಯಕ್ಷಣಗಳನ್ನು ಸ್ಮರಿಸಬಹುದು. ಶ್ರೀರಾಮಕೃಷ್ಣರ ದಿವ್ಯ ಸನ್ನಿಧಿಯ ಅನುಸಂಧಾನವನ್ನು ಸತತವಾಗಿ ಮಾಡುತ್ತಾ ನಮ್ಮ ನಿತ್ಯಜೀವನದಲ್ಲಿ ಆಧ್ಯಾತ್ಮಿಕ ಸಾಧನೆಗೆ ಅತ್ಯಗತ್ಯವಾದ ಮಾರ್ಗದರ್ಶನವನ್ನು ಅವರಿಂದಲೇ ನೇರವಾಗಿ ಪಡೆಯಲು ನೆರವಾಗುತ್ತದೆ, 'ವಚನವೇದ.'

ಗೃಹಸ್ಥರು, ಯುವಕಯುವತಿಯರು, ಸ್ತ್ರೀಯರು, ಭಿನ್ನ ಭಿನ್ನ ಹಿನ್ನೆಲೆಯುಳ್ಳ ಸಾಧಕರು, ಮುಮುಕ್ಷುಗಳು ದೈವಕೇಂದ್ರಿತ ಜೀವನ ನಡೆಸಲು ಶ್ರೀರಾಮಕೃಷ್ಣರ ಪ್ರತ್ಯಕ ಮಾರ್ಗದರ್ಶನವನ್ನು ಹೇಗೆ ಪಡೆದರು ಎಂಬುದನ್ನು ಆಧಾರಸಹಿತವಾಗಿ ನಿರೂಪಿಸುತ್ತದೆ 'ವಚನವೇದ.' ಅಹಂಕೇಂದ್ರಿತವಾದ ಪ್ರಾಪಂಚಿಕ ಜೀವನವನ್ನು ಉಜ್ಜೀವನವಾಗಿಸಿಕೊಂಡು ದೈವಕೇಂದ್ರಿತ ಜೀವನ ನಡೆಸಬೇಕು ಎಂಬ ವಿಚಾರಕ್ಕೆ ಮಹತ್ವ ನೀಡುತ್ತಾರೆ ಶ್ರೀರಾಮಕೃಷ್ಣರು. ಭಗವಂತನೊಬ್ಬನೇ ಸತ್ಯ, ಉಳಿದುವೆಲ್ಲಾ ಅಸತ್ಯ ಎಂದು ಶ್ರೀರಾಮಕೃಷ್ಣರು ಪುನಃ ಪುನಃ ಸಾರುತ್ತಿದ್ದರು. ಭಗವಂತನೇ ವಸ್ತು, ಉಳಿದುವೆಲ್ಲಾ ಅವಸ್ತು, ಅಶಾಶ್ವತ ಎಂಬುದು ಅವರ ಸಂದೇಶದ ಪಲ್ಲವಿಯಾಗಿತ್ತು. ಆದ್ದರಿಂದ ಸತ್ಯದೆಡೆಗೆ ಅಭಿಮುಖವಾದ ಜೀವನವೇ ನಿಜವಾದ ಆಧ್ಯಾತ್ಮಿಕ ಜೀವನ. ಅಂತಹಾ ಜೀವನವು ಕೃತ್ರಿಮವೂ ಅಲ್ಲ, ಕಾಲ್ಪನಿಕವೂ ಅಲ್ಲ.

ಗೃಹಸ್ಥರಿಗೂ ಶ್ರೀರಾಮಕೃಷ್ಣರು ದೃಢವಾದ ಭರವಸೆ ನೀಡುತ್ತಾರೆ. ಯಾವ ರೀತಿಯ ಕೊರಗು, ನಿರಾಶೆಗಳಿಂದ ಕುಗ್ಗದೇ ಗೃಹಸ್ಥರಾದವರೂ ಕೂಡ ತಮ್ಮ ಬದುಕನ್ನು ಆಧ್ಯಾತ್ಮೀಕರಣಗೊಳಿಸಬಹುದು. ಭಕ್ತಿಮಾರ್ಗವನ್ನು ಆಶ್ರಯಿಸಿ ಅವರು ಸಾಧನೆಯಲ್ಲಿ ಮುನ್ನಡೆಯಬಹುದು. ತಮ್ಮ ಮನಸ್ಸನ್ನು ಭಾಗವತ ಜೀವನಕ್ಕೆ ತರಬೇತುಗೊಳಿಸಿ ದೇವರ ಸಾಕ್ಷಾತ್ಕಾರ ಪಡೆಯಬಹುದು. ಭಗವಂತನನ್ನು ಶರಣಾಗತಿಯಿಂದ ಅವಲಂಬಿಸಿ, ಸಾಂಸಾರಿಕ ಕರ್ತವ್ಯಗಳನ್ನೂ, ವೃತ್ತಿಸಂಬಂಧಿತ ಜವಾಬ್ದಾರಿಗಳನ್ನೂ ನಿರ್ವಹಿಸುತ್ತಾ ಆತ್ಮನಿರ್ಭರರಾಗಿ ಮುನ್ನಡೆಯಬಹುದು. ಆದರೆ ಫಲಾಪೇಕ್ಷೆಯನ್ನು ತೊರೆದು ವೈರಾಗ್ಯವನ್ನು ಬೆಳೆಸಿಕೊಳ್ಳುವುದು ಅಗತ್ಯ. ಸಂನ್ಯಾಸಿಗಳಿಗೆ ಭಗವಂತನು ಹೇಗೆ ಪ್ರಾಪ್ತನಾಗುವನೋ ಗೃಹಸ್ಥರಿಗೂ ಹಾಗೆಯೇ ವ್ಯಾಕುಲತೆ, ಶ್ರದ್ಧೆಗಳಿಗೆ ಅನುಸಾರವಾಗಿ ಪ್ರಾಪ್ತನಾಗುವನು. ಅವನು ನಿಷ್ಪಕ್ಷಪಾತಿಯಾಗಿರುವ ನಮ್ಮ ಅಂತರ್ಯಾಮಿಯು. ಭಗವಂತನ ಸನ್ನಿಧಿಯನ್ನು ಅನುಭವಿಸುವುದು ಪ್ರತಿಯೊಂದು ಜೀವದ ಜನ್ಮಸಿದ್ಧ ಹಕ್ಕು. ಅವನ ಕೃಪೆಗೆ ಪಾತ್ರರಾಗಲು ಸರ್ವರಿಗೂ ಅಧಿಕಾರವಿದೆ. ಈ ಉದ್ದೇಶದಿಂದಲೇ ಅವರು ಏಕಾಂಗಿಯಾಗಿ ಉಳಿದು, ಸಂನ್ಯಾಸಿಗಳಿಗೆ ಮಾತ್ರ ಆದರ್ಶವಾಗದೆ, ಶ್ರೀಮಾತೆ ಶಾರದಾದೇವಿಯವರನ್ನು ವಿವಾಹವಾಗಿ ಗೃಹಸ್ಥರಿಗೂ ಮಾದರಿಯಾಗಿದ್ದಾರೆ. ಕೌಟುಂಬಿಕ ಜೀವನವನ್ನು ಆಧ್ಯಾತ್ಮೀಕರಣಗೊಳಿಸಬೇಕು ಎಂಬ ಸಂದೇಶವನ್ನು ತಮ್ಮ ದಿವ್ಯದಾಂಪತ್ಯದ ಮೂಲಕ ಗೃಹಸ್ಥರಿಗೆ ನೀಡಿದ್ದಾರೆ. ಸಂಸಾರದಲ್ಲಿ ಶ್ರಮಿಸುತ್ತಿರುವವರೂ ಸದಾ ಶ್ರೀರಾಮಕೃಷ್ಣ-ಶ್ರೀಶಾರದಾದೇವಿಯವರ ಅಲೌಕಿಕ ದಾಂಪತ್ಯದ ಆದರ್ಶದಿಂದ ಸ್ಫೂರ್ತಿ ಪಡೆದು ಆತ್ಮೋದ್ಧಾರದ ಹಾದಿಯಲ್ಲಿ ಮುನ್ನಡೆಯಬಹುದು. ಏಕೆಂದರೆ ಸಮಾಜದಲ್ಲಿ ಶೇಕಡಾ ೯೯ ಭಾಗ ಗೃಹಸ್ಥರೇ ಇದ್ದಾರೆ. ಆಧ್ಯಾತ್ಮಿಕತೆಯು ಅವರನ್ನೂ ತಲುಪಬೇಕು; ಅವರ ಜೀವನವೂ ಪರಿವರ್ತಿತವಾಗಬೇಕು. ಅವರ ಅನೇಕ ಗೃಹೀಭಕ್ತರು ಉತ್ತಮ ಸಾಧನೆಯನ್ನು ಜೀವನದಲ್ಲಿ ಮಾಡಿ, ಭಗವಂತನ ಕೃಪೆಗೆ ಪಾತ್ರರಾಗಿ ಅವನ ಸಾಕ್ಷಾತ್ಕಾರವನ್ನು ಪಡೆದಿದ್ದಾರೆ. ಹೀಗೆ ಶ್ರೀರಾಮಕೃಷ್ಣರು ಎಲ್ಲ ಜೀವರುಗಳ ಆಧ್ಯಾತ್ಮಿಕ ಅಗತ್ಯವನ್ನೂ ತಿಳಿದುಕೊಂಡು, ಎಲ್ಲರಿಗೂ ಸ್ಪಂದಿಸಿ ಪರಿವರ್ತಿಸುವ ಕಲಿಯುಗದ ಕಲ್ಪತರುವಾಗಿದ್ದಾರೆ.

ಶ್ರೀರಾಮಕೃಷ್ಣರ ಜೀವನ ಮತ್ತು ಬೋಧನೆಗಳು ಧಾರ್ಮಿಕ ಸಂದೇಹಗಳನ್ನು ಪರಿಣಾಮಕಾರಿಯಾಗಿ ಪರಿಹರಿಸುತ್ತವೆ; ಸಮಾಜದ ಎಲ್ಲಾ ವರ್ಗಗಳ ಜನರ ಆಧ್ಯಾತ್ಮಿಕ ಹಂಬಲ, ಅಭೀಪ್ಸೆಗಳನ್ನು ಪೂರ್ಣಮಾಡುತ್ತದೆ; ಎಲ್ಲಾ ಧಾರ್ಮಿಕ ಪಂಥಗಳ, ಎಲ್ಲಾ ಹಂತಗಳ ಸಾಧಕರ ಅನ್ವೇಷಣೆಗೆ ಸೂಕ್ತ ಉತ್ತರ ನೀಡುತ್ತದೆ. ಆಧುನಿಕ ಯುವಜನತೆಯ ಪ್ರಶ್ನಿಸುವ ಮನಸ್ಸುಗಳಿಗೆ ಶ್ರೀರಾಮಕೃಷ್ಣರು, ಶ್ರೀಶಾರದಾದೇವಿಯವರು, ಸ್ವಾಮಿ ವಿವೇಕಾನಂದರು — ದಿವ್ಯತ್ರಯರು ನಮಗೆಲ್ಲಾ ಅಧಿಕೃತವೂ, ಚಿರಂತನವೂ ಆದ ಸ್ನೇಹಿತರೂ, ತತ್ತ್ವಜ್ಞಾನಿಗಳೂ, ಹಾಗೂ ಆಚಾರ್ಯರೂ ಆಗಿದ್ದಾರೆ. ಅವರು ಜಗದ್ವ್ಯಕ್ತಿಗಳು, ಬೃಹದ್ವ್ಯಕ್ತಿಗಳು ಮತ್ತು ಮಹದ್ವ್ಯಕ್ತಿಗಳು. ವಿಭಿನ್ನ ಧರ್ಮಗಳ ಹುದುಗಿರುವ ಆಧ್ಯಾತ್ಮಿಕ ಆಯಾಮಗಳ ಪ್ರಾತಿನಿಧಿಕ ಸಾಕಾರ ಸ್ವರೂಪವಾಗಿದ್ದಾರೆ ದಿವ್ಯತ್ರಯರು. ಆದ್ದರಿಂದಲೇ ಪರಮವಿಶಾಲತೆಯನ್ನು ಹೊಂದಿರುವ, ಯಾವುದೇ ಸಂಕುಚಿತ ಸೈದ್ಧಾಂತಿಕ ಚೌಕಟ್ಟಿಗೆ ಸಿಲುಕದ ಶ್ರೀರಾಮಕೃಷ್ಣರ ಆಧ್ಯಾತ್ಮಿಕತೆಯ ಶಕ್ತಿಯು ಅಷ್ಟು ಅಲ್ಪಕಾಲದಲ್ಲಿ ಜಗದ್ವ್ಯಾಪಕವಾಗಿ ವಿಸ್ತರಿಸಿದೆ. ನಮ್ಮ ನಮ್ಮ ಶ್ರದ್ಧೆಗನುಸಾರವಾಗಿಯೇ ಅವರು ನಮ್ಮ ಮನಸ್ಸನ್ನು ಉನ್ಮೀಲನಗೊಳಿಸಿ, ಪ್ರಾಮಾಣಿಕವಾದ ಭಗವದ್ಭಕ್ತರಾಗುವಂತೆ, ಸಾಧಕರಾಗುವಂತೆ ಸತತವಾಗಿ ಸ್ಫೂರ್ತಿ ನೀಡುತ್ತಿದ್ದಾರೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಪರಮಗೌರವ ಮತ್ತು ಪರಮ ಭಕ್ತಿಯುತರಾಗಿ ಶ್ರೀರಾಮಕೃಷ್ಣರನ್ನು 'ಅವತಾರ ವರಿಷ್ಠ' ಎಂದು ಸಂಬೋಧಿಸಿದ್ದಾರೆ. ತಾವು ಗುರುಮಹಾರಾಜರಿಗೆ ರಚಿಸಿದ ಆರಾತ್ರಿಕದ ಮೊದಲ ಸಾಲಿನಲ್ಲಿಯೇ 'ಖಂಡನ ಭವ ಬಂಧನ' ಅಂದರೆ ಅಜ್ಞಾನಜನ್ಯ ಸಾಂಸಾರಿಕ ಬಂಧನವನ್ನು ತುಂಡರಿಸಿ ನಮ್ಮನ್ನು ಉದ್ಧರಿಸುವವರು ಎಂದು ಮುಕ್ತಕಂಠದಿಂದ ಉದ್ಘೋಷಿಸಿದ್ದಾರೆ. ಅವರನ್ನು 'ಯೋಗ ಸಹಾಯ್' ಎಂದು ಶ್ಲಾಘಿಸಿ ಆರಾಧಿಸಿದ್ದಾರೆ. ಶ್ರೀರಾಮಕೃಷ್ಣರು ಮನುಕುಲಕ್ಕೆ ಸಾಧಿಸಿಕೊಟ್ಟಿರುವ ಆಧ್ಯಾತ್ಮಿಕ ಸೌಲಭ್ಯವು ಧನಾತ್ಮಕವಾಗಿದ್ದು ಸರ್ವರೂ ಅದರ ನೆರವನ್ನು ಪಡೆಯಲು ಮುಕ್ತ ಅವಕಾಶವಿದೆ. ಅಷ್ಟೇ ಅಲ್ಲದೆ, ಕೆಸರು ಮಣ್ಣಿನ ಹಾದಿಯಲ್ಲಿ ಹಸುವಿನ ಪಾದದಿಂದ

ಉಂಟಾದ ಹಳ್ಳದ ನೀರನ್ನು ಸುಲಭವಾಗಿ ದಾಟುವಂತೆ, ಭವ ಸಾಗರವೂ ಬದ್ಧಜೀವರಿಗೆ ಅತ್ಯಂತ ಕಿರಿದಾಗಿ, ಶ್ರೀರಾಮಕೃಷ್ಣರ ಚರಣಾಶ್ರಯ ಪಡೆದು ಅನಾಯಾಸವಾಗಿ ದಾಟಿಬಿಡುವರು ಎಂಬುದನ್ನು 'ಸಂಪದ ತವ ಶ್ರೀಪದ ಭವ ಗೋಷ್ಪದ ವಾರಿ ಯಥಾಯ್' ಎಂಬ ಸಾಲಿನಲ್ಲಿ ಮನಮುಟ್ಟುವಂತೆ ವರ್ಣಿಸಿದ್ದಾರೆ. ಆಧುನಿಕ ಶಿಕ್ಷಣದ ಸೌಲಭ್ಯವಿಲ್ಲದ ಗ್ರಾಮೀಣ ಮುಗ್ಧ ಜನರಿಗೂ ಕೂಡಾ ಶ್ರೀರಾಮಕೃಷ್ಣರು ಧರ್ಮ ಮತ್ತು ಆಧ್ಯಾತ್ಮವು ಅರ್ಥವಾಗುವಂತೆ ಸುಲಭಗೊಳಿಸಿದ್ದಾರೆ. ಗಹನವಾದ ಆಧ್ಯಾತ್ಮಿಕ ಸತ್ಯವನ್ನು, ಜಟಿಲವಾದ ಶಾಸ್ತ್ರಗಳ ಸಂದೇಶವನ್ನು ಅವರು ತಮ್ಮ ಆಡುಮಾತಿನ ಸರಳ ಬಂಗಾಳಿಯಲ್ಲಿ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಆದ್ದರಿಂದ ಶ್ರೀರಾಮಕೃಷ್ಣರು ಆಧುನಿಕಕಾಲದ ಅಭೂತಪೂರ್ವವಾದ, ವಿಶಿಷ್ಟವಾದ ಮನುಕುಲದ ಆಚಾರ್ಯರೂ, ಗುರುವೂ ಆಗಿದ್ದಾರೆ ಎಂಬುದು ವಾಸ್ತವಿಕ ಸತ್ಯವಾಗಿದೆ.

ಶ್ರೀರಾಮಕೃಷ್ಣರು ಶಾಸ್ತ್ರ ವಿಷಯಗಳ ಮೇಲೆ ಪಾಂಡಿತ್ಯ ಪಡೆದಿರುವ ವಿದ್ವಾಂಸರಲ್ಲ; ಹಲವಾರು ವಿಚಾರಧಾರೆಗಳನ್ನು ಕರತಲಾಮಲಕ ಮಾಡಿಕೊಂಡಿರುವ ಶೈಕ್ಷಣಿಕ ತಜ್ಞರೂ ಅಲ್ಲ. ಪ್ರಾಥಮಿಕ ಹಂತದ ಔಪಚಾರಿಕ ಶಿಕ್ಷಣವನ್ನು ಮೀರಿ ಅವರು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಿಗೆ ಹೋದವರೇ ಅಲ್ಲ. ಆದರೆ ನೇರ ಆಧ್ಯಾತ್ಮಿಕ ಅನುಭವಗಳಿಂದ ಶ್ರೀಮಂತರಾಗಿರುವ ಭಾವಸಂಪನ್ನರು ಅವರು. ಪರಾತ್ಪರ ಪುರುಷೋತ್ತಮನಿಂದಲೇ ನಿಯೋಜಿತರಾಗಿರುವ ಆಧುನಿಕ ಜಗತ್ತಿನ ದಿವ್ಯಗುರುಗಳು ಅವರು. ಶ್ರೀರಾಮಕೃಷ್ಣರ ಪ್ರತ್ಯಕ್ಷ ಸ್ವಾನುಭವದ ದೀಪ್ತಿಯೇ ಅವರ ಬೋಧನೆಯಾಗಿರುವುದರಿಂದ, ಅವರ ಮಾತುಗಳು ಮಾನವರ ಮನಸ್ಸು ಮತ್ತು ಹೃದಯಗಳ ಮೇಲೆ ಅತ್ಯಂತ ಶಕ್ತಿಪೂರ್ಣವಾದ ಪ್ರಭಾವವನ್ನು ಬೀರುತ್ತಿವೆ.

ನಮ್ಮ ಅಂತರ್ಯದ ಅತ್ಯಂತ ಆಳ ಅಥವಾ ಎತ್ತರದಲ್ಲಿರುವ 'ಪರಾ' ಎಂಬ ಸ್ತರದಿಂದ ಶಾಬ್ದಿಕ ಅಭಿವ್ಯಕ್ತಿಯು ಮೂಡಿ ಇಳಿದು ಬರುತ್ತದೆ ಎಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಆ ಸೂಕ್ಷ್ಮಾತಿಸೂಕ್ಷ್ಮ ಸ್ತರದಿಂದ ಪಶ್ಯಂತಿ, ಮಧ್ಯಮಾ ಎಂಬ ಹಂತಗಳನ್ನು ಹಾದು ಬಂದು 'ವೈಖರಿ' ಎಂದು ಅಂತಿಮವಾಗಿ ಶಾಬ್ದಿಕ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಆದರೆ ಶ್ರೀರಾಮಕೃಷ್ಣರ ವಚನವು ದಿವ್ಯಮೂಲವಾದ ಪರಾದಿಂದ ಹೊಮ್ಮಿ ಪೂರ್ಣವಾಗಿ ಶುದ್ಧರೂಪದ ವೈಖರಿಯಾಗುತ್ತದೆ; ಮಧ್ಯಂತರದ ಸ್ತರಗಳಲ್ಲಿ ಮೂಲಶಕ್ತಿಯನ್ನು ಕಳೆದುಕೊಳ್ಳದೆ ಸಂವಹನಗೊಳ್ಳುತ್ತದೆ. ಮನಸ್ಸಿನ ಮಾಧ್ಯಮವು ಪರಮಶುದ್ಧವಾಗಿರುವುದರಿಂದ ವೈಖರಿಯು ವಿರೂಪಗೊಳ್ಳುವುದಿಲ್ಲ. ಮರಳಿ ಮರಳಿ ಸಮಾಧಿಯ ಆಳದ ಶಾಂತಿ, ಬೆಳಕುಗಳಿಂದ ದೀಪ್ತವಾಗಿರುವದರಿಂದ ವಿಕೃತಗೊಳ್ಳುವುದೂ ಇಲ್ಲ. 'ಶ್ರೀರಾಮಕೃಷ್ಣ ವಚನವೇದ' ಗ್ರಂಥವನ್ನು ಅಧ್ಯಯನ ಮಾಡಿದಾಗ ಆತ್ಮೋದ್ಧಾರಕ ಶಕ್ತಿಯುಳ್ಳ ಅವರ ಸ್ವಾನುಭವಜನ್ಯ ಮಾತುಗಳಿಗೆ ನಾವು ತೆರೆದುಕೊಳ್ಳು ತ್ತೇವೆ. ನಮ್ಮ ಮನಸ್ಸು ಪ್ರಜ್ಞಾಪೂರ್ವಕವಾಗಿ ಉತ್ಕಟ ವ್ಯಾಕುಲತೆಯಿಂದ ಅವರ ವಿಭೂತಿಯುಕ್ತ ವಾಣಿಯನ್ನು ಸ್ವೀಕರಿಸಿದಾಗ ಅರ್ಥ ಮಾಡಿಕೊಂಡಾಗ ಮತ್ತು ನಮ್ಮ ಪ್ರಜ್ಞೆ ಅವರ ಪ್ರಜ್ಞೆಯೊಡನೆ ಯುಕ್ತವಾದಾಗ, ಆಧ್ಯಾತ್ಮಿಕ ಶಕ್ತಿಯು ನಮ್ಮ ಹೃದಯಾಂತ ರಾಳಕ್ಕೂ, ನಮ್ಮ ಸುಪ್ತಚೇತನ (Subconcious)ಕ್ಕೂ ಇಳಿದು ನಮ್ಮಲ್ಲಿ ಸುಪ್ತವಾದ ಆಧ್ಯಾತ್ಮಿಕ ಸಂಸ್ಕಾರಗಳನ್ನು ಸಕ್ರಿಯ ವಾಗುವಂತೆ ಮೇಲೆಬ್ಬಿಸುವುದು. ಪ್ರಾಪಂಚಿಕ ಸಂಸ್ಕಾರಗಳನ್ನು ದಗ್ಧಗೊಳಿಸುವುದು. ಮಬ್ಬುಕವಿದ ನಮ್ಮ ಮನಸ್ಸನ್ನು ಮೇಲೆತ್ತಿ ಮಾನಸ ಜ್ಯೋತಿಯಂತೆ ಬೆಳಗಿ ಉನ್ನತವಾಗಿಸುವುದು. ಶ್ರೀರಾಮ ಕೃಷ್ಣರ ಜೀವನ ಮತ್ತು ಬೋಧನೆಗಳನ್ನು ಅನುಸಂಧಾನ ಮಾಡುತ್ತಾ ಅವರ ಸಂಪರ್ಕಕ್ಕೆ ಬರುವ ಎಲ್ಲ ಮುಮುಕ್ಷು ಭಕ್ತರು ಭಗವಂತನ ಪರಮಸನ್ನಿಧಿಯಿಂದಲೇ ಆಧ್ಯಾತ್ಮಿಕ ಪುರೋಗಮನಕ್ಕಾಗಿ ಅನು ಗ್ರಹ, ಕೃಪೆಯನ್ನು ಪಡೆಯುವರು. ಇಂದು ಜಗತ್ತಿನಾದ್ಯಂತ ಸಹಸ್ರಾರು ಜನರು ಶ್ರೀರಾಮಕೃಷ್ಣರಿಂದ ದಿವ್ಯಸ್ಫೂರ್ತಿಯನ್ನು ಪಡೆಯುತ್ತಿರುವುದನ್ನು ನಾವು ಕಾಣುತ್ತೇವೆ.

ಆದ್ದರಿಂದ 'ಶ್ರೀರಾಮಕೃಷ್ಣ ವಚನವೇದ'ದ ಅಧ್ಯಯನ ಮಾಡುವವರು 'ಶ್ರೀರಾಮಕೃಷ್ಣರ ಸನ್ನಿಧಿಯ ಸಾಧನ' ಎಂಬ ನವೀನ ಸಾಧನೆಯನ್ನು ಮಾಡಲು ಸುವರ್ಣಾವಕಾಶವನ್ನು ಪಡೆಯುವರು. ಕೊರೋನಾದಿಂದ ಮನೆಗಳಲ್ಲೇ ಇರಬೇಕಾಗಿ ಬಂದಿರುವ ಜನರು ತಮಗಿರುವ ಅಮೂಲ್ಯವಾದ ಕಾಲಾವಕಾಶವನ್ನು 'ವಚನವೇದ'ದ ಅಧ್ಯಯನ ಮಾಡಲು ಮತ್ತು ಶ್ರೀರಾಮಕೃಷ್ಣರ ಸಾನ್ನಿಧ್ಯದ ಸಾಧನೆಯಲ್ಲಿ ನಿರತರಾಗಲು ಸದುಪಯೋಗ ಮಾಡಿಕೊಳ್ಳಬೇಕು. 'ವಚನವೇದ' ಓದುವುದರ ಮೂಲಕ ನಮ್ಮ ಮನಸ್ಸನ್ನು ಪರಮಾತ್ಮನಿಗೆ ಸುಲಭವಾಗಿ ಜೋಡಿಸಬಹುದು. ಹೀಗೆ ಶ್ರೀರಾಮಕೃಷ್ಣರು ದೇವರು ಎಂಬ 'ಸಾಧ್ಯ', ಅವನನ್ನು ತಲುಪುವ ಮಾರ್ಗವಾದ 'ಸಾಧನ' ಮತ್ತು ಶ್ರದ್ಧೆ, ನಿಷ್ಠೆಗಳಿಂದ ಗುರಿಯನ್ನು ಸಾಧಿಸುವ 'ಆದರ್ಶ ಸಾಧಕ' ಎಂಬ ತ್ರಿವಳಿ ಆದರ್ಶಗಳನ್ನು ಪ್ರತಿನಿಧಿಸುವ ಸಂಕೇತವಾಗಿದ್ದಾರೆ. ಯಾವುದೇ ಮಾರ್ಗವನ್ನು ಮಾನವರು ಅನುಸರಿಸಿದರೂ ದೈವಕ್ಕಾಗಿ ತೀವ್ರವಾದ ವ್ಯಾಕುಲತೆಯೇ ಅತ್ಯಂತ ಪ್ರಧಾನವಾದ, ಅಗತ್ಯವಾದ ಅರ್ಹತೆಯಾಗಿದೆ ಎಂಬುದು ಶ್ರೀರಾಮಕೃಷ್ಣರ ನಿಶ್ಚಿತ ಅಭಿಪ್ರಾಯ. ಪರಿಶುದ್ಧತೆ ಮತ್ತು ಏಕಾಗ್ರತೆಗಳು ಈ ವ್ಯಾಕುಲತೆಯನ್ನು ಸಫಲಗೊಳಿಸುವ ಎಡ-ಬಲ ರೆಕ್ಕೆಗಳಂತಿರಬೇಕು ಎಂದು ಅವರು ಸೂಚಿಸುತ್ತಾರೆ.

ಪ್ರಪಂಚದಲ್ಲಿ ವೈರಾಗ್ಯವನ್ನೂ, ದೇವರಿಗಾಗಿ ಹಂಬಲವನ್ನೂ ಬೆಳೆಸಿಕೊಂಡು ಮೇಲ್ಕಾಣಿಸಿದ ಗುಣಲಕ್ಷಣಗಳನ್ನು ನಾವು ವೃದ್ಧಿಮಾಡಿಕೊಂಡರೆ ಶ್ರೀರಾಮಕೃಷ್ಣರ ಕೃಪೆಗೆ ನಾವು ಪಾತ್ರರಾಗುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ವಿಭಿನ್ನ ದೇಶಿಗಳ, ನಾನಾ ಸಮಾಜಗಳ ಎಲ್ಲಾ ವರ್ಗಗಳ ಜನರು ಆಧ್ಯಾತ್ಮಿಕ ಮಹಾಸಾಗರದಲ್ಲಿ ಶ್ರೀರಾಮಕೃಷ್ಣರೆಂಬ ನೌಕೆಯನ್ನೇರಿ ದೂರ ತೀರವನ್ನು ಸೇರಲು ಪ್ರಯಾಣ ಮಾಡುತ್ತಿರುವರು ಎಂಬುದು